ಇದನ್ನು ಮನಗಂಡು ಹಳೇ ಬಂದರು ಅಳಿವೆ ಬಾಗಿಲಿನಲ್ಲಿ ಹೂಳೆತ್ತುವ ಕಾರ್ಯವನ್ನು ಅಲ್ಲಿಗೆ ಕೈಬಿಡಲಾಯಿತು. ದಿನಾಂಕ: 3-3-90 ರಂದು ಮಾನ್ಯ ಬಂದರು ಹಾಗೂ ಆಗಿನ ಮೀನುಗಾರಿಕಾ ಸಚಿವರ ಕೊಠಡಿಯಲ್ಲಿ ಈ ಸಂಬಂಧ ಜರುಗಿದ ಸಭೆಯಲ್ಲಿ ಹಳೇ ಮಂಗಳೂರು ಬಂದರಿನಲ್ಲಿ ಬ್ರೇಕ್‌ವಾಟರ್ ನಿರ್ಮಾಣದ ಬಳಿಕವೇ ಅಳಿವೆ ಬಾಗಿಲಿನ ಹೂಳೆತ್ತುವ ಕಾರ್ಯವನ್ನು ಕೈಗೆತ್ತಿಕೊಳ್ಳಬಹುದೆಂದು ತೀರ್ಮಾನಿಸಲಾಯಿತು. ಅದರಂತೆ, ಈಗ ಬ್ರೇಕ್ ವಾಟರ್ ಕಾಮಗಾರಿಯು ಜರುಗುತ್ತಿದ್ದು ಅಳಿವೆಯ ಹೊಳೆತ್ತುವ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸಹಾಯವಾಗುವಂತೆ ಈಗಾಗಲೇ ಟೆಂಡರನ್ನು ಸ್ವೀಕರಿಸಲಾಗಿದೆ. ಹಾಗೂ 5 ಹೂಳೆತ್ತುವ ಸಂಸ್ಥೆಗಳು ಟೆಂಡರನ್ನು ಸಲ್ಲಿಸಿದ್ದು ಇವುಗಳು ಪರಿಶೀಲನೆಯಲ್ಲಿವೆ. ಹಾಗೂ ಒಂದು ಡ್ರೆಜ್ಜರನ್ನೂ ಸಹ ಕೊಳ್ಳಲು ಕ್ರಮ ಕೈಗೊಳ್ಳಲಾಗುತಿದೆ. ಮಂಗಳೂರು ಮೀನುಗಾರಿಗಾ ಧಕ್ಕೆಯಲ್ಲಿ 12,000 ಘೆ, ಮೀ. ನಷ್ಟು ಹೂಳೆತ್ತುವ ಕಾರ್ಯವನ್ನು ಮಾಡಲಾಗಿದೆ. ಮಂಗಳೂರು ಹಳೇ ಬಂದರಿನಲ್ಲಿ ಆದಷ್ಟು ಬೇಗನೇ ಬ್ರೇಕ್‌ವಾಟರ್ ಕಾಮಗಾರಿಯನ್ನು ಮುಗಿಸಿ, ಹೊಳೆತ್ತುವ ಕಾರ್ಯವನ್ನು ತ್ವರಿತವಾಗಿ ಮುಗಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಪಕ್ಕದ ರಾಜ್ಯವಾದ ಕೇರಳದಿಂದ ಬಾಡಿಗೆ ಆಧಾರದ ಮೇಲೆ ಡ್ರೆಜ್ಜರನ್ನು ತೆಗೆದುಕೊಳ್ಳಲು ಪ್ರಯತ್ನಿಸಲಾಗಿ ಅದು ಫಲಕಾರಿಯಾಗಲಿಲ್ಲ.

ಮಂಗಳೂರು ಹಳೇ ಬಂದರು ಮತ್ತು ಕಾರವಾರದಿಂದ ದಕ್ಷಿಣಕ್ಕೆ ಇರುವ ಇತರೆ ಎಲ್ಲಾ ಸಣ್ಣ ಬಂದರುಗಳಲ್ಲಿ ಮೇ ತಿಂಗಳ 16 ರಿಂದ ಸೆಪ್ಟೆಂಬರ್ 15 ರವರೆಗೆ ಚಟುವಟಿಕೆಗಳನ್ನು ಮಾಡಬಾರದೆಂದು ಭಾರತ ಸರ್ಕಾರದ ಪ್ರಕಟಣೆಯನ್ನು " ವೆಸ್ಟ್ ಕೊಸ್ಟ್ ಪೈಲೆಟ್" ಎಂಬ ಪುಸ್ತಕದಲ್ಲಿ ಪ್ರಕಟಿಸಲಾಗಿದೆ. ಅಂತೆಯೆ ಕರ್ನಾಟಕ ಹಾರ್ಬರ್ ಕ್ರಾಫ್ಟ್ ರೂಲ್ಸ್, 1963 ರಲ್ಲಿ ಕೂಡ ಸೆಪ್ಟೆಂಬರ್ 16 ರಿಂದ ಮೇ 15ರವರೆಗೆ ಅನುಕೂಲ ಋತುವೆಂದು (ಮೇ 16 ರಿಂದ ಸೆಪ್ಟೆಂಬರ್ 15ರವರೆಗೆ ಪ್ರತಿಕೂಲ ಋತುವೆಂದು) ಕರ್ನಾಟಕ ಸರ್ಕಾರವು ನಮೂದಿಸಿದೆ. ಪ್ರತಿಕೂಲ ಋತುವಿನಲ್ಲಿ ಮೀನುಗಾರಿಕೆ ಕೈಗೊಳ್ಳುವುದು ಅಪಾಯಕಾರಿಯಾಗಿರುತ್ತದೆ. ಈ ಬಗ್ಗೆ ಆಕಾಶವಾಣಿ, ದೂರದರ್ಶನ ಹಾಗೂ ಕರಪತ್ರ ಮುಖಾಂತರ ಮೀನುಗಾರರಿಗೆ ಎಚ್ಚರಿಕೆ ನೀಡಲಾಗುತ್ತಿದೆ. ಹಾಗೂ ಎಚ್ಚರಿಸುವ ಫಲಕಗಳನ್ನು ಸಹ ಹಾಕಲಾಗುತ್ತಿದೆ.

(6) ಮಂಗಳೂರು ತಾಲ್ಲೂಕು ಉಳ್ಳಾಯ ಬೆಟ್ಟು ಗ್ರಾಮದಲ್ಲಿ ಮದುವೆ ಸಮಾರಂಭದಲ್ಲಿ ಊಟ ಮಾಡಿದ ಸುಮಾರು 50-60 ಮಂದಿ ಆಸ್ಪತ್ರೆಗೆ ತುತ್ತಾಗಿ 3 ಜನರು ಅಸುನೀಗಿರುವುದರ ಬಗ್ಗೆ ತನಿಖೆ ನಡೆಸುವ ಕುರಿತು.

ಶ್ರೀ ರಾಮನಾಥ ರೈ (ಬಂಟ್ವಾಳ):- ನನ್ನ ಕ್ಷೇತ್ರದ ಮಂಗಳೂರು ತಾಲ್ಲೂಕಿನ ಉಳ್ಳಾಯಬೆಟ್ಟು ಗ್ರಾಮದಲ್ಲಿ ಮದುವೆ ಸಮಾರಂಭದಲ್ಲಿ ಭಾಗವಹಿಸಿ ಊಟ ಮಾಡಿದ್ದ ಸುಮಾರು 50-60 ಜನರಿಗೆ ವಾಂತಿ ಭೇದಿ ಪ್ರಾರಂಭವಾಗಿ ಇದರಲ್ಲಿ 3 ಜನರು ಅಸು ನೀಗಿರುತ್ತಾರೆ. ಉಳಿದವರು ಆಸ್ಪತ್ರೆಯಲ್ಲಿ ಹೊರರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ದುರಂತಕ್ಕೆ ಮದುವೆಯ ಊಟ ಕಾರಣವೆಂದು ಜನಜನಿತವಾಗಿದೆ, ಆದರೆ ಮಂಗಳೂರು ಸಾರ್ವಜನಿಕ ಆಸ್ಪತ್ರೆಯ ಅಧಿಕಾರಿಗಳು ಮದುವೆ ಊಟ ವ್ಯವಸ್ಥೆ ಮಾಡಿದ್ದ ಗುತ್ತಿಗೆದಾರರನ್ನು ರಕ್ಷಣೆ ಮಾಡುವ ಉದ್ದೇಶದಿಂದ ಕಾಲರಾ ಸೋಂಕು ಎಂದು ಹೇಳಿಕೆಯನ್ನೀಡಿರುತ್ತಾರೆ. ಮಾತ್ರವಲ್ಲ ಈ ದುರಂತದಿಂದ ಅಸುನೀಗಿದವರಿಗೆ ಯಾವುದೇ ರೀತಿಯ ಪರಿಹಾರ ಸಿಗುವ ಸಾಧ್ಯತೆಯಿಲ್ಲ ಎಂದು ಕಂಡುಬಂದಿದೆ, ಆದುದರಿಂದ ದಯಮಾಡಿ ಈ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವುದರ ಜೊತೆಗೆ ನೊಂದವರ ಕುಟುಂಬಕ್ಕೆ ಪರಿಹಾರವನ್ನು ಕೊಡಬೇಕೆನ್ನುವುದರ ಬಗ್ಗೆ ಮಾನ್ಯ ಆರೋಗ್ಯ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಶಿವಣ್ಣ:(ಸಮಾಜ ಕಲ್ಯಾಣ ಇಲಾಖೆ ಸಚಿವರು):- ಮಾನ್ಯ ಸಭಾಪತಿಗಳೆ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ ಈ ಹೇಳಿಕೆ ನೀಡಬಯಸುತ್ತೇನೆ.

ಮಂಗಳೂರು ತಾಲ್ಲೂಕು ಉಳ್ಳಾಯ ಬೆಟ್ಟು ಗ್ರಾಮದಲ್ಲಿ ಮಾರ್ಚ್ 3 ರಿಂದ ವಾಂತಿ ಭೇದಿ

ಪ್ರಕರಣಗಳು ಪ್ರಾರಂಭವಾಗಿ 10ನೇ ದಿನಾಂಕದವರೆವಿಗೂ 49 ಪ್ರಕರಣಗಳು ಮತ್ತು 3 ಮರಣಗಳು ಸಂಭವಿಸಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ವರದಿ ಮಾಡಿರುತ್ತಾರೆ.

ಈ ಪ್ರಕರಣಗಳಲ್ಲಿ ಕೆಲವರು ಜಿಲ್ಲಾ ವೆನ್‌ಲಾಕ್ ಆಸ್ಪತ್ರೆ, ಮಂಗಳೂರು ಮತ್ತು ಫಾದರ್‌ಮುಲ್ಲರ್ ಆಸ್ಪತ್ರೆ,ಮಂಗಳೂರು ಇಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಈ ಚಿಕಿತ್ಸೆ ಪಡೆದ ನಂತರ ಮಲ ಪರೀಕ್ಷೆಯನ್ನು ಮಾಡಿದಾಗ ಅದರಲ್ಲಿ ಕಾಲರಾ ಕ್ರಿಮಿಗಳು ಕಂಡು ಬಂದಿವೆಯೆಂದು ಪ್ರಯೋಗಾಲಯದ ವರದಿಗಳಿಂದ ಸಾಬೀತಾಗಿದೆ.

ಈ ಗ್ರಾಮದಲ್ಲಿ ಮಾರ್ಚ್ 1ನೇ ತಾರೀಖು ಒಂದು ಮದುವೆ ಸಮಾರಂಭ ನಡೆದಿದ್ದು ಅದರಲ್ಲಿ ಭಾಗವಹಿಸಿದ್ದ ಹಲವರಿಗೂ ಈ ವಾಂತಿ ಭೇದಿ ಖಾಯಿಲೆ ಬಂದಿದೆ. ಆದರೆ, ಈ ಖಾಯಿಲೆ ಕಾಲರಾವೆಂದು ವಿಚಿತಪಡಿಸಲಾಗಿದ್ದು ಮದುವೆಯ ಊಟಕ್ಕೂ ಇದಕ್ಕೂ ನೇರವಾದ ಸಂಬಂಧವಿಲ್ಲವೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ವರದಿ ಮಾಡಿರುತ್ತಾರೆ.

ಈ ಹಳ್ಳಿಯಲ್ಲಿ ಕಾಲರಾ ಪ್ರಕರಣ ಸಂಬಂಧಪಟ್ಟ ಎಲ್ಲಾ ನಿಯಂತ್ರಣ ಕ್ರಮಗಳನ್ನು ತೆಗೆದುಕೊಳ್ಳಲಾಗಿದ್ದು ಈಗ 15 ದಿವಸಗಳಿಂದ ಈ ಖಾಯಿಲೆಯ ಯಾವ ಪ್ರಕರಣಗಳಾಗಲಿ, ಮರಣಗಳಾಗಲಿ ವರದಿಯಾಗಿಲ್ಲ.

ಶ್ರೀ ಕೆ.ಗಂಗಾಧರ ಗೌಡ:- ನನ್ನ ನಿಯಮ 334ರ ವಿಷಯಕ್ಕೆ ಉತ್ತರ ಬಂದಿಲ್ಲ.

ಛೇರ್ಮನ್:- ಅದು ಲೂಕೋಪಯೋಗಿ ಮಂತ್ರಿಗಳಿಗೆ ಟ್ರಾನ್ಸ್‌ಫರ್ ಆಗಿದೆ, ಆದ್ದರಿಂದ ಉತ್ತರ ಬಂದಿಲ್ಲ ಈಗ ಶಿಕ್ಷಣ ಮಂತ್ರಿಯವರು ಕನ್ನಡ ವಿಶ್ವವಿದ್ಯಾನಿಲಯದ ತಿದ್ದುಪಡಿ ವಿಧೇಯಕವನ್ನು ಮಂಡಿಸುವುದು.

ಶಾಸನಾ ರಚನಾ ಕಾರ್ಯಕಲಾಪಗಳು

(1) ಕನ್ನಡ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ, 1992

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ವೀರಪ್ಪ ಮೊಯಿಲಿ : (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, 1992ರ ಕನ್ನಡ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವನೆ ಹೀಗಿದೆ: 1992ರ ಕನ್ನಡ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಮತ್ತು ಮಂಡಿಸಲು ಅನುಮತಿ ನೀಡಲಾಯಿತು.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೆ, 1992ರ ಕನ್ನಡ ವಿಶ್ವ ವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್:- ವಿಧೇಯಕವನ್ನು ಮಂಡಿಸಲಾಗಿದೆ.

(2) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಧೇಯಕ, 1992

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ.ವೀರಪ್ಪ ಮೊಯಿಲಿ :- ಸನ್ಮಾನ್ಯ ಅಧ್ಯಕ್ಷರೆ, 1992 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಹೀಗಿದೆ : 1992 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೆ, 1992 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ